C.R.P.67

| Form No.4 (Civil)<br>Deposition Sheets<br>(R.P.No.57) |
|---|

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್.ಸಿ. ಸಂಖ್ಯೆಃ101/2023 C/w 113/2023**

ಪ್ರಾಸಾ. 26 ಚಾಸಾ. 33

| | |
|---|---|
| ಸಾಕ್ಷಿದಾರರ ಹೆಸರು | ಆನಂದ್ ಡಿ.ಕೆ |
| ತಂದೆಯ ಹೆಸರು | ಲೇಟ್ ಕಾಳೇಗೌಡ |
| ವಯಸ್ಸು | 40 ವರ್ಷಗಳು |
| ಉದ್ಯೋಗ | ವ್ಯವಸಾಯ |
| ವಾಸ | ದೊಡ್ಡರಸಿನಕೆರೆ ಗ್ರಾಮ |

**ಸಾಕ್ಷಿಯನ್ನು ದಿನಾಂಕಃ24.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಈಗ ತೋರಿಸಿದಂತಹ ನೋಟೀಸಿನಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಗೆ ತೋರಿಸಿದಂತಹ ನೋಟೀಸನ್ನು ನಿಪಿ-62 ಎಂದು ಸಾಕ್ಷಿಯ ಸಹಿಯನ್ನು ನಿಪಿ-62(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು 2-3 ವರ್ಷಗಳ ಹಿಂದೆ ಕೆ ಎಂ ದೊಡ್ಡಿ ಪೊಲೀಸ್ ಠಾಣೆಗೆ ನನ್ನ ಸ್ವಂತ ಕೆಲಸಕ್ಕೆ ಹೋದಾಗ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ. ಅದೇ ರೀತಿ ಈಗ ತೋರಿಸಿದ ಮಹಜರ್ (ಸದರಿ ಮಹಜರ್ ಸಿಸಿಟಿವಿ ಫುಟೇಜಿಗೆ ಪೆನ್ ಡ್ರೈವ್ ನಿಂದ ಸಂಗ್ರಹಿಸಿರುವುದಾಗಿರುತ್ತದೆ) ನಲ್ಲಿಯ ಸಹ ನನ್ನ ನನ್ನ ಸಹಿ ಇರುತ್ತದೆ. ಸದರಿ ಮಹಜರನ್ನು ನಿಪಿ-63 ಎಂದು ಸಾಕ್ಷಿಯ ಸಹಿಯನ್ನು ನಿಪಿ-63(ಎ) ಎಂದು ಗುರುತಿಸಲಾಯಿತು. ನನ್ನ ಮುಂದೆ ಪೋಲೀಸರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಮತ್ತು ನನ್ನ ಮುಂದೆ ಯಾವುದೇ ಡೇಟಾ ಪೆನ್ ಡ್ರೈವ್ ಗೆ ಸಂಗ್ರಹಿಸಿರುವುದಿಲ್ಲ. ನಾನಲ್ಲದೇ ಬೇರೆ ಯಾರು ಸದರಿ

ದಾಖಲೆಗಳಿಗೆ ಸಹಿ ಮಾಡಿದ್ದಾರೆ ಎಂದು ಗೊತ್ತಿಲ್ಲ. ಹಾಗೂ ಸದರಿ ದಾಖಲೆಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

**3.** ಈಗ ತೋರಿಸಿದ ಲಕೋಟೆಯ ಮೇಲೆ ಅಂಟಿಸಿರುವ ಚೀಟಿಯ ಮೇಲೂ ಸಹ ನನ್ನ ಸಹಿ ಇರುತ್ತದೆ. ಆದರೆ ಯಾವ ವಿಚಾರವಾಗಿ ನನ್ನ ಸಹಿ ಪಡೆದರು ಎಂದು ನನಗೆ ಗೊತ್ತಿಲ್ಲ. ಈಗ ತೋರಿಸಿದಂತಹ ಲಕೋಟೆಯಲ್ಲಿ ಏನಿದೆ ಎಂದು ಗೊತ್ತಿಲ್ಲ. ಈ ಹಂತದಲ್ಲಿ ಲಕೋಟೆಯಲ್ಲಿರುವ ಪೆನ್ ಡ್ರೈವನ್ನು ತೆಗೆದು ತೋರಿಸಿದಾಗ ಸಾಕ್ಷಿ ಅದರಲ್ಲಿ ಏನಿದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಪೆನ್ ಡ್ರೈವನ್ನು ನಿಪಿ-**64** ಎಂದು, ಲಕೋಟೆಯ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ-**64**(ಎ) ಎಂದು ಗುರುತಿಸಲಾಯಿತು. ಸಂಜೆ ಸಮಯದಲ್ಲಿ ಪೊಲೀಸರು ಸದರಿ ದಾಖಲೆಗಳಿಗೆ ನನ್ನ ಸಹಿ ಪಡೆದಿರುತ್ತಾರೆ.

> (ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ದಿನಾಂಕಃ**06.01.2023** ರಂದು ಪೊಲೀಸರು ನನಗೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಒಂದು ಡಿವಿಆರ್ ನ್ನು ಅಮಾನತುಪಡಿಸಿಕೊಂಡಿದ್ದೇವೆ. ಸದರಿ ಡಿವಿಆರ್ ನಿಂದ ಸಿಸಿ ಟಿವಿ ಫುಟೇಜಸನ್ನು ಪೆನ್ ಡ್ರೈವ್ ಗೆ ಸಂಗ್ರಹಿಸಬೇಕಾಗುತ್ತದೆ. ಸದರಿ ಪ್ರಕ್ರಿಯೆ ಚಾಸಾ-**22** ರವರು ಮಾಡುತ್ತಾರೆ ಎಂದು ಮತ್ತು ಮಹಜರ್ ಮಾಡಬೇಕು ಆ ಸಮಯದಲ್ಲಿ ಹಾಜರಿರಬೇಕೆಂದು ನಿಪಿ-**62** ರಂತೆ ನೋಟೀಸ್ ನೀಡಿದಾಗ ನಾನು ಹಾಗೂ ಚಾಸಾ-**34** ರವರು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**2.** ನಂತರ ಪೊಲೀಸ್ ಠಾಣೆಯಲ್ಲಿ ಸಂಜೆ **4.30** ರಿಂದ **5.30** ಗಂಟೆಯವರೆಗೆ ನಮ್ಮ ಸಮಕ್ಷಮ ಕಿರಣ್/ ಚಾಸಾ-**22** ರವರು ಹೆಚ್ ಐ ಕೆ ವಿಷನ್ ಕಂಪನಿಯ ಡಿವಿಆರ್ ನ್ನು ತೆಗೆದು ಠಾಣೆಯಲ್ಲಿದ್ದ ಮಾನಿಟರ್ ಸಹಾಯದಿಂದ ಡಿವಿಆರ್ ನಲ್ಲಿ ಇದ್ದ ಕ್ಯಾಮೆರಾ **3** ಮತ್ತು **7**

ರಲ್ಲಿ ದಿನಾಂಕಃ**20.11.2022** ರಂದು ಸಂಜೆ **3.45** ರಿಂದ **4.15** ಗಂಟೆಯವರೆಗಿನ ಫುಟೇಜಸ್ ನ್ನು ಸಂಗ್ರಹಿಸಿ ಅದನ್ನು ಈಗ ತೋರಿಸಿದಂತಹ ನಿಪಿ-**64** ಪೆನ್ ಡ್ರೈವ್ ಗೆ ವರ್ಗಾವಣೆ ಮಾಡಿದ ಬಗ್ಗೆ ನಿಪಿ-**63** ರಂತೆ ಪೊಲೀಸರು ಮಹಜರ್ ಮಾಡಿ ನಂತರ ಸದರಿ ಪೆನ್ ಡ್ರೈವನ್ನು ಲಕೋಟೆಗೆ ಹಾಕಿ ಸೀಲ್ ಮಾಡಿಕೊಂಡು ನನ್ನ ಸಹಿಯನ್ನು ನಿಪಿ-**64**(ಎ) ರಂತೆ ಪಡೆದರು ಎಂದರೆ ಸರಿಯಲ್ಲ. ಸದರಿ ಪ್ರಕ್ರಿಯೆಯನ್ನು ನನ್ನ ಮತ್ತು ಚಾಸಾ-**34** ರವರ ಸಮಕ್ಷಮ ಮಾಡಿದ್ದರೂ ಸಹ ಹಾಗೂ ಮಹಜರ್ ಮಾಡಿದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

**2** ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.